ಆರ್ ಬಿ ಐ / 2004–05 / 268

ಆರ್ ಪಿಸಿಡಿ. ಸಿಒ. ಆರ್ ಎಫ್. ಬಿಸಿ 55 /07.38–01/2004–05
ಎಲ್ಲ ರಾಜ್ಯ ಮತ್ತು ಜಿಲ್ಲಾ ಸಹಕಾರ ಬ್ಯಾಂಕುಗಳಿಗೆ

ನವಂಬರ್ 1, 2004

ಮಾನ್ಯರೆ,

**2004–05ನೇ ವರ್ಷದ ವಾರ್ಷಿಕ ನೀತಿ ವಿವರಣಾ ಪತ್ರ ಮದ್ಯಕಾಲೀನ ಪರಿಶೀಲನೆ–**
**ದೇಶೀಯ/ ಸಾಮಾನ್ಯ ಅನಿವಾಸಿ ಸಾವಧಿ ಠೇವಣಿಗಳ ಅವಧಿಯನ್ನು ತಗ್ಗಿಸುವುದು**

ನಮ್ಮ ಸುತ್ತೋಲೆ ಆರ್‌ಪಿಸಿಡಿ ಸಂಖ್ಯೆ ಆರ್‌ಎಫ್. ಡಿಐಆರ್. ಬಿಸಿ 77/07.38.01/2000–01 ದಿನಾಂಕ ಏಪ್ರಿಲ್ 19, 2001ರ ಪ್ಯಾರಾ 1(1) ನ್ನು ದಯವಿಟ್ಟು ನೋಡಿ. ಪ್ರಸ್ತುತ ಬ್ಯಾಂಕುಗಳು 15 ಲಕ್ಷ ರೂಪಾಯಿ ಮತ್ತು ಹೆಚ್ಚಿನ ಸಾವಧಿ ಠೇವಣಿಗಳನ್ನು ಕನಿಷ್ಟ 7 ದಿನಗಳ ಅವಧಿಗೆ ಅಂಗೀಕರಿಸಬಹುದಾಗಿದೆ ಮತ್ತು 15 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಮೊತ್ತದ ಸಾವಧಿ ಠೇವಣಿಗಳಿಗೆ ಕನಿಷ್ಟ ಅವಧಿ 15 ದಿವಸಗಳಾಗಿರಬೇಕು.

2.ಈ ಸಂಬಂಧದಲ್ಲಿ 2004–05 ನೇ ವರ್ಷದ ವಾರ್ಷಿಕ ನೀತಿ **ವಿವರಣಾ ಪತ್ರ** ಮದ್ಯಕಾಲೀನ ಪರಿಶೀಲನೆಯ ಪ್ಯಾರಾ 73 ಮತ್ತು 74 ರ ಪರಾಮರ್ಶೆಗೆ ನಾವು ಆಹ್ವಾನಿಸುತ್ತೇನೆ (ಪ್ರತಿ ಲಗತ್ತಿಸಿದೆ). ಅದರಲ್ಲಿ ತಿಳಿಸಿರುವಂತೆ, ಮೇಲಿನ ಮಾರ್ಗಸೂಚಿಗಳನ್ನು ಪರಿಶೀಲಿಸಲಾಗಿದೆ ಮತ್ತು ಸಾವಧಿ ಠೇವಣಿಗಳ ಅವಧಿಯಲ್ಲಿ ಏಕರೂಪತೆಯನ್ನು ಒದಗಿಸುವ ದೃಷ್ಟಿಯಿಂದ ಬ್ಯಾಂಕುಗಳು ತಮ್ಮ ವಿವೇಚನೆಯಂತೆ ದೇಶೀಯ / ಸಾಮಾನ್ಯ ಅನಿವಾಸಿ ಸಾವಧಿ ಠೇವಣಿಗಳು 15 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದರೂ ಅವುಗಳ ಕನಿಷ್ಠ ಅವಧಿಯನ್ನು 15 ದಿವಸಗಳಿಂದ 7 ದಿವಸಗಳಿಗೆ ಇಳಿಸಬೇಕೆಂದು ನಿರ್ಧರಿಸಲಾಗಿದೆ. ಆದರೆ, ಬ್ಯಾಂಕುಗಳು, 15 ಲಕ್ಷ ರೂಪಾಯಿ ಮತ್ತು ಹೆಚ್ಚಿನ ಸಾವಧಿ ಠೇವಣಿಗಳ ಮೇಲೆ ಇಲ್ಲಿಯವರೆಗೆ ನೀಡುತ್ತಿದ್ದಂತೆ ಬೇರೆ ಬೇರೆ ಬಡ್ಡಿ ದರಗಳನ್ನು ನೀಡುವ ವಿಷಯದಲ್ಲಿ ಸ್ವಾತಂತ್ರ್ಯ ಹೊಂದಿರುವುದು ಮುಂದುವರೆಯುತ್ತದೆ. ಪರಿಷ್ಕೃತ ಸೂಚನೆಗಳು ನವೆಂಬರ್ 1, 2004 ರಿಂದ ಜಾರಿಗೆ ಬರುತ್ತವೆ.

3. ತಲುಪಿದ್ದಕ್ಕೆ ದಯವಿಟ್ಟು ನಮ್ಮ ಸಂಬಂಧಪಟ್ಟ ಪ್ರಾದೇಶಿಕ ಕಚೇರಿಗೆ ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ

**(ಜಿ. ಶ್ರೀನಿವಾಸನ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು)**

ಲಗತ್ತುಗಳು: ಮೇಲಿನಂತೆ

ಬಡ್ಡಿ ದರ ನೀತಿ:

<u>**(ಪಿ) ದೇಶೀಯ ಸಾವಧಿ ಠೇವಣಿಗಳ ಅವಧಿ ತಗ್ಗಿಸುವುದು:**</u>

73. ಪ್ರಸ್ತುತ ಸಗಟು ದೇಶೀಯ ಸಾವಧಿ ಠೇವಣಿಗಳ (15 ಲಕ್ಷ ರೂ ಮತ್ತು ಹೆಚ್ಚು) ಅವಧಿ ತುಂಬುವ ಕನಿಷ್ಠ ಅವಧಿ 7 ದಿವಸಗಳಾಗಿದ್ದರೆ, ಇದು ಚಿಲ್ಲರೆ ದೇಶೀಯ ಸಾವಧಿ ಠೇವಣಿಗಳಿಗೆ (15 ಲಕ್ಷ ರೂಗಳಿಗಿಂತ ಕಡಿಮೆ) 15 ದಿವಸಗಳಾಗಿಯೇ ಮುಂದುವರೆಯುತ್ತದೆ. ಸಾವಧಿ ಠೇವಣಿಗಳ ಅವಧಿಯಲ್ಲಿ ಏಕರೂಪತೆ ತರುವ ಸಲುವಾಗಿ ಈ ಮುಂದಿನಂತೆ ಉದ್ದೇಶಿಸಲಾಗಿದೆ:

- ಬ್ಯಾಂಕುಗಳು ತಮ್ಮ ವಿವೇಚನೆಯಂತೆ, ಚಿಲ್ಲರೆ ದೇಶೀಯ ಸಾವಧಿ ಠೇವಣಿಗಳ (15 ಲಕ್ಷರೂಗಳಿಗಿಂತ ಕಡಿಮೆ) ಕನಿಷ್ಠ ಅವಧಿಯನ್ನು 15 ದಿವಸಗಳಿಂದ 7 ದಿವಸಗಳಿಗೆ ಇಳಿಸಬಹುದು.

74. ಆದರೆ, ಬ್ಯಾಂಕುಗಳು, 15 ಲಕ್ಷ ರೂ ಮತ್ತು ಹೆಚ್ಚಿನ ಸಗಟು ದೇಶೀಯ ಸಾವಧಿ ಠೇವಣಿಗಳ ಮೇಲೆ ಈಗಿನಂತೆಯೇ ಬೇರೆ ಬೇರೆ ಬಡ್ಡಿ ದರಗಳನ್ನು ನೀಡುವ ಸ್ವಾತಂತ್ರ್ಯ ಹೊಂದಿರುವುದು ಮುಂದುವರೆಯುತ್ತದೆ.